ಕುಡಿಯಲು ಮಾಡಿದ ಉಪಾಯ ನೆನಪಿಸಿಕೊಂಡರೆ ಕಾಗೆ ಖಂಡಿತಾ ಜಾಣ ಪಕ್ಷಿ.

ಇನ್ನೊಂದು ಸಂಗತಿ ನೆನಪಾಗುತ್ತಿದೆ. ಮನೆಯಲ್ಲಿ ಮಾಡಿದ ತಿಂಡಿಯನ್ನೋ, ಅನ್ನವನ್ನೋ ಪ್ರತಿದಿನ ಎನ್ನುವಂತೆ ಅದಕ್ಕೆಂದೇ ಮೀಸಲಿಟ್ಟ ತಟ್ಟೆಯಲ್ಲಿ ಹಾಕಿ ಟೆರೇಸಿನ ಮೇಲಿಡುವ ಮಂದಿ ಪೇಟೆ ಪಟ್ಟಣಗಳಲ್ಲಿ ಸಾಕಷ್ಟಿದ್ದಾರೆ. ಹೀಗೆ ಕಾಕರಾಜನ ಹಸಿವು ತಣಿಸಿ ಶನಿಯನ್ನು ತೃಪ್ತಿಪಡಿಸುತ್ತಿದ್ದೇವೆಂದು ಅವರ ನಂಬಿಕೆ.

ಶನಿಯ ವಾಹನ ನರಮನುಷ್ಯರ ವಾಹನಗಳ ಮೇಲೆ ಬಂದು ಕೂರುವುದು, ಹಿಕ್ಕೆ ಹಾಕುವುದೂ ಕೂಡಾ ಅಪಶಕುನದ ವ್ಯಾಪ್ತಿಗೆ ಬಂದು ಆ ಕುರಿತಾಗಿ ಮಾಧ್ಯಮಗಳಲ್ಲಿ ಜ್ಯೋತಿಷ್ಯ ತಜ್ಞರನ್ನು ಕೂರಿಸಿಕೊಂಡು ಚರ್ಚೆ ನಡೆಸುವುದಕ್ಕೆ ನಮ್ಮಂತಾ ವೀಕ್ಷಕರು ಸಾಕ್ಷಿಯಾಗಿದ್ದೇವೆ.

ಶನಿಮಹಾತ್ಮನ ದೊಡ್ಡದೊಂದು ಪಟ ಹಿಡಿದುಕೊಂಡು ಭಿಕ್ಷೆಗೆ ಬರುವವರ ವಿಚಾರ ಬಿಡಿ, ತಳ್ಳುಗಾಡಿಯ ಮೇಲೆ ಈ ಮಹಾಶಯನ ಪಟ ಇಟ್ಟು, ಅಲಂಕರಿಸಿ, ಗೌಜುಗದ್ದಲ ಸಮೇತ ಬೀದಿಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾ ಮನೆಮನೆಗಳಿಂದ ಕಾಣಿಕೆ ಸಂಗ್ರಹಿಸುವ ಮಂದಿ ಇದ್ದಾರೆ. ಶನಿಯ ಹೆಸರಿನ ಬಲದಿಂದಲೇ ಇಂತವರ ಕಾಣಿಕೆ ಡಬ್ಬಿ ತುಂಬಿ ತುಳುಕಾಡುವುದರ ಕುರಿತು ಸಂದೇಹ ಇಲ್ಲ.

ಇನ್ನೊಂದು ವಿಚಾರ ಪ್ರಸ್ತಾಪಿಸಿ ಈ ಬರಹಕ್ಕೆ ಮಂಗಳ ಹಾಡುತ್ತೇನೆ. ಕಳ್ಳಕಾಕರು ವಿಜೃಂಭಿಸುತ್ತಿರುವ ಈ ಕಾಲಘಟ್ಟದಲ್ಲಿ ಮಹಾರಾಷ್ಟ್ರದಲ್ಲಿರುವ ಬಾಗಿಲಿಲ್ಲದ ಊರಿನ ಕತೆ ಎಲ್ಲರಿಗೂ ಗೊತ್ತೇ ಇರುತ್ತದೆ. ಶನಿ ಸಿಂಗಣಾಪುರದಲ್ಲಿ ಯಾವ ಮನೆಗಳಲ್ಲೂ ಮುಂಬಾಗಿಲು ಹಾಕುವ ಪದ್ಧತಿ ಇಲ್ಲ. ಶನಿಯ ಕಣ್ಣಂಕೆ ಇರುವ ಆ ಊರಿನಲ್ಲಿ ಕಳುವಾಗುವ ಪ್ರಸಂಗ ಇಲ್ಲವೇ ಇಲ್ಲ ಎನ್ನುವುದು ಒಂದು ಹೇಳಿಕೆ, ನಂಬಿಕೆ. ಶನಿಗೆ ಕಳ್ಳರೂ ಹೆದರುತ್ತಾರೆ ಮತ್ತು ಅವನನ್ನು ಕೆಣಕಲು ಅಂಜುತ್ತಾರೆ. ಶನಿ ಸಿಂಗಣಾಪುರದ ಶನಿದೇವರು ಅಂದರೆ ದೊಡ್ಡ ಗಾತ್ರದ ಒಂದು ಶಿಲಾರೂಪ. ಈ ಶಿಲೆಗೆ ಭಕ್ತಾದಿಗಳು ಎಳ್ಳೆಣ್ಣೆ ಎರೆದು ಪೂಜಿಸುವ ವಾಡಿಕೆ. ಮಹಿಳೆಯರಿಗೆ ಹೀಗೆ ಪೂಜಾ ವಿಧಿ ನಡೆಸುವ ಅಧಿಕಾರ ಇರಲಿಲ್ಲ. ಇತ್ತೀಚೆಗೆ ಮಹಿಳೆಯರ ಪರವಾಗಿ ಹೋರಾಟ ನಡೆಸಿದ ಯುವತಿಯೊಬ್ಬಳ ದಿಟ್ಟತನದಿಂದ ಈ ಸಂಪ್ರದಾಯ ಅಂತ್ಯಗೊಂಡಿತು. ಶನಿದೇವರನ್ನು ಕೈಯಾರೆ ಪೂಜಿಸಲು ಮಹಿಳೆಯರಿಗೂ ಅಧಿಕಾರ ದಕ್ಕಿತು.

ಎಂತಾ ಸರ್ವಾಧಿಕಾರಿಯೇ ಇರಲಿ, ಅವನ ಹೆಸರಲ್ಲಿ ಆಡಳಿತ ನಡೆಸುವವರ ದರ್ಬಾರು ಇರಲಿ, ಮೀರುವ ಮನೋಭಾವದವರು ಇದ್ದೇ ಇರುತ್ತಾರೆ ಮತ್ತು ಪರಿಣಾಮದ ಕುರಿತು ಅವರಿಗೆ ಅಂಜಿಕೆ ಇರುವುದಲ್ಲ ಅನ್ನುವುದು ರಾಜಕೀಯವಾಗಿಯೂ ಸಲ್ಲತಕ್ಕ ಮಾತು, ಅಲ್ಲವೇ?

---

### ವಸುಮತಿ ಉಡುಪ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಕಿರಣಕೆರೆ ಸ್ವಗ್ರಾಮ. ಪ್ರಸ್ತುತ ಮೈಸೂರಿನಲ್ಲಿ ವಾಸ. ಕತೆ, ಕಾದಂಬರಿ, ನಾಟಕ, ಶಿಶುಸಾಹಿತ್ಯ, ಪ್ರಬಂಧ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರವಣಿಗೆ ಮಾಡಿದ್ದಾರೆ. ಸಮಗ್ರ ಕಥಾ ಸಂಕಲನ ಮೂರು ಭಾಗಗಳಲ್ಲಿ ಪ್ರಕಟವಾಗಿದೆ. ಮಲೆನಾಡಿನ ಪರಿಸರ, ಭಾಷೆ, ಜೀವನಶೈಲಿ ಅವರ ಬಹುತೇಕ ಕತೆಗಳ ವಸ್ತು.